
ಪ್ರತಿ ಶುಕ್ರವಾರ ರಾತ್ರಿ ಪತ್ರಿಕೆ ಅಚ್ಚಾಗುತ್ತಿತ್ತು. ಎಲ್ಲರೂ ಎಲ್ಲ ಕೆಲಸವನ್ನೂ ಮಾಡುತ್ತಿದ್ದರು. ಗಾಂಧೀಜಿ ರಾತ್ರಿಯಿಡೀ ಆಫೀಸಿನಲ್ಲೇ ಇದ್ದು ಅವರಿಗೆಲ್ಲ ತಿಂಡಿತಿನಿಸು ಮಾಡಿ ಕೊಡುತ್ತಾ, ಪತ್ರಿಕೆಯ ಹಾಳೆಗಳನ್ನು ಜೋಡಿಸುತ್ತಾ ಜೊತೆಯಾಗುತ್ತಿದ್ದರು. ಬೆಳಗಿನ ಜಾವದ ಹೊತ್ತಿಗೆ ಪತ್ರಿಕೆ ಎಲ್ಲ ಕಡೆ ತಲುಪಲು ಹೊರಡುತ್ತಿತ್ತು. ಗಾಂಧೀಜಿ ಜೈಲಿನಲ್ಲಿದ್ದ ಕಾಲ ಬಿಟ್ಟರೆ, 1914ರವರೆಗೂ ಅವರ ಬರಹಗಳಿಲ್ಲದ ಪತ್ರಿಕೆಯ ಸಂಚಿಕೆಯಿರಲಿಲ್ಲ. ಭಾರತೀಯರನ್ನು ತಿದ್ದುವ, ಹಕ್ಕುಗಳನ್ನು ಪಡೆಯಲು ಸಜ್ಜುಗೊಳಿಸುವ, ದಕ್ಷಿಣ ಆಫ್ರಿಕಾದ ಬ್ರಿಟಿಷ್ ಸರ್ಕಾರದ ಅಧಿಕಾರಿಗಳಿಗೆ ತಿಳಿ ಹೇಳುವ, ತಿದ್ದುವ, ಮುಖಾಮುಖಿಯಾಗುವ ಕೆಲಸ ನಡೆಯುತ್ತಲೇ ಇತ್ತು. ಈ ಅವಧಿಯಲ್ಲಿ ಫೀನಿಕ್ಸ್ ವಸತಿಪ್ರದೇಶದಲ್ಲಿನ ತೋಟದ ಕೃಷಿ ಮತ್ತು ಪತ್ರಿಕೆಗಾಗಿ ಗಾಂಧೀಜಿ ಸುಮಾರು 5,000 ಪೌಂಡುಗಳನ್ನು ತಾವೇ ಖರ್ಚು ಮಾಡಿದರು. ತೋಟದಲ್ಲಿ ಎಲ್ಲರೂ ಕೃಷಿ ಮಾಡಿ ಅಷ್ಟಿಷ್ಟು ಹಣ ಗಳಿಸಿ, ಪತ್ರಿಕೆಯನ್ನು ಗಟ್ಟಿಗೊಳಿಸಬಹುದೆಂಬ ಅವರ ಆಸೆ ಕೈಗೂಡಲಿಲ್ಲ.

ಆದರೆ, ದಕ್ಷಿಣ ಆಫ್ರಿಕಾದಲ್ಲಿ ಈ ಪುಟ್ಟ ಪತ್ರಿಕೆಯ ಪ್ರಭಾವವೇನೂ ಕಡಿಮೆಯಿರಲಿಲ್ಲ. ಅಷ್ಟೇ ಮುಖ್ಯವಾಗಿ, ತೋಟದ ಕೆಲಸದ ದೈಹಿಕ ಶ್ರಮ ಹಾಗೂ ಬರವಣಿಗೆಯ ಬೌದ್ಧಿಕ ಶ್ರಮ ಎರಡನ್ನೂ ಬೆಸೆಯುವ ಕೆಲಸದಿಂದ ಗಾಂಧೀಜಿಯ ವ್ಯಕ್ತಿತ್ವ ಹಾಗೂ ಬರವಣಿಗೆಗೆ ವಿಶೇಷ ಆಳ ಬಂದಿದ್ದು ಕೂಡ ಮುಖ್ಯ. ಗಾಂಧೀಜಿಯ ಮೊದಲ ಹಾಗೂ ಪೂರ್ಣಗೊಂಡ ಏಕಮಾತ್ರ ಪುಸ್ತಕ 'ಹಿಂದ್ ಸ್ವರಾಜ್' ಸಂಪಾದಕ–ಓದುಗರ ನಡುವಣ ಸಂವಾದದ ಮೂಲಕ ಒಂದು ಪ್ರಶ್ನೆಯ ಹಲವು ಮುಖಗಳನ್ನು ಮಂಡಿಸುವ ತಂತ್ರ ಬಳಸಿರುವುದರಲ್ಲಿ ಪತ್ರಿಕೋದ್ಯಮದ ಅನುಭವವೂ ಸೇರಿಕೊಂಡಿದೆ. ಭಾರತೀಯ ಸ್ವಾತಂತ್ರ್ಯ ಚಳವಳಿ ಹೊಸ ನಾಯಕನೊಬ್ಬನನ್ನು ಎದುರು ನೋಡುವಂತಾಗಲು ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ನಡೆಸಿದ ಹೋರಾಟದ ಜೊತೆಗೇ, 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಮೂಲಕ ತಲುಪಿದ್ದ ಅವರ ವಿಚಾರಗಳೂ ಕಾರಣವಾಗಿದ್ದವು. ಗಾಂಧೀಜಿ ಭಾರತಕ್ಕೆ ಮರಳಿದ ಮೇಲೂ 'ಇಂಡಿಯನ್ ಒಪೀನಿಯನ್' ಪ್ರಕಟವಾಗುತ್ತಲೇ ಇತ್ತು. ಗಾಂಧೀಜಿಯ ಎರಡನೇ ಮಗ ಮಣಿಲಾಲ್ ಗಾಂಧಿ ಕೂಡ ಈ ಪತ್ರಿಕೆಯನ್ನು ಕೆಲ ವರ್ಷ ನಡೆಸಿದರು. ಆಗಲೂ ಗಾಂಧೀ ಮಾರ್ಗದರ್ಶನ ಮುಂದುವರಿದೇ ಇತ್ತು.

'ಇಂಡಿಯನ್ ಒಪೀನಿಯನ್' ಬಗ್ಗೆ ಮುಂದೊಮ್ಮೆ ತಮ್ಮ 'ಆ್ಯನ್ ಆಟೋಬಯಾಗ್ರಫಿ ಅಥವಾ ದ ಸ್ಟೋರಿ ಆಫ್ ಮೈ ಎಕ್ಸ್ ಪರಿಮೆಂಟ್ಸ್ ವಿತ್ ಟ್ರೂತ್' ಆತ್ಮಚರಿತ್ರೆಯಲ್ಲಿ ಗಾಂಧೀಜಿ ಬರೆದ ಮಾತುಗಳು ಅವರ ಜೀವನ ದೃಷ್ಟಿ ಹಾಗೂ ಗದ್ಯ ಬರವಣಿಗೆಗೆ ಪತ್ರಿಕಾ ಬರವಣಿಗೆ ಕಲಿಸಿದ ಸತ್ಯಶೋಧನೆಯ ದಾರಿಯನ್ನು ಸೂಚಿಸುತ್ತವೆ:



'ಯೋಚನೆ ಮಾಡದೆ, ವಿಚಾರ ಮಾಡದೆ ಬರೆದ ಒಂದು ಮಾತನ್ನಾಗಲೀ, ಉದ್ದೇಶಪೂರ್ವಕವಾದ ಅತಿಶಯೋಕ್ತಿಯನ್ನಾಗಲೀ ಬರೆದುದು ನನಗೆ ನೆನಪಿಲ್ಲ. ಈ ದೃಷ್ಟಿಯಿಂದ ಆಫ್ರಿಕಾದಲ್ಲಿ ನಾವು ಹೊರಡಿಸಿದ 'ಇಂಡಿಯನ್ ಒಪೀನಿಯನ್'ಪತ್ರಿಕೆ ನಿಜಕ್ಕೂ ನನಗೆ ಆತ್ಮಸಂಯಮದ ಪ್ರಯೋಗಕ್ಷೇತ್ರವಾಯಿತು.